**All India Radio: Bangalore**
**National Bulletin In Kannada**
**18.08.2026 1.10 pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**18.08.2026 1.10 pm**

**<>><><*><><<>**

ಮುಖ್ಯಾಂಶಗಳು

**೧. ನವದೆಹಲಿಯಲ್ಲಿ ಭಾರತದ ಆತಿಥ್ಯದಲ್ಲಿಂದು ೧೨ನೇ ಬ್ರಿಕ್ಸ್ ಪರಿಸರ ಸಚಿವರ ಸಭೆ; ಕೇಂದ್ರ ಸಚಿವ ಭೂಪೇಂದರ್ ಯಾದವ್ ಅಧ್ಯಕ್ಷತೆ**

**೨. ಅಯೋಧ್ಯೆ ರಾಮಮಂದಿರ ದೇಣಿಗೆ ಅಕ್ರಮ ಪ್ರಕರಣ: ಚಂಪತ್ ರಾಯ್, ಅನಿಲ್ ಮಿಶ್ರಾ ದೋಷಮುಕ್ತಗೊಳಿಸಿ ಎಸ್‌ಐಟಿ ವರದಿ**

**೩. ಅಮೆರಿಕದ ಕಟ್ಟುನಿಟ್ಟಿನ ಚುನಾವಣಾ ನಿಯಮಗಳಿಗೆ ಭಾರತ ಒಂದು ಮಾದರಿ - ಅಧ್ಯಕ್ಷ ಡೋನಾಲ್ಡ್ ಟ್ರಂಪ್**

**೪. ಕೆಪಿಎಸ್‌ಸಿ ಅಕ್ರಮ ಪ್ರಕರಣ: ಕರ್ನಾಟಕ ಮತ್ತು ಅಹಮದಾಬಾದ್‌ನ ೨೧ ಕಡೆಗಳಲ್ಲಿ ಇಡಿ ದಾಳಿ**

**೫. ಭಾರತ-ಶ್ರೀಲಂಕಾ ಟೆಸ್ಟ್ ಕ್ರಿಕೆಟ್; ಎರಡನೇ ಇನ್ನಿಂಗ್ಸ್‌ನಲ್ಲಿ ಭಾರತಕ್ಕೆ ೩೦೦ಕ್ಕೂ ಅಧಿಕ ರನ್‌ಗಳ ಮುನ್ನಡೆ**

**<>><><*><><<>**

ಭಾರತದ ಆತಿಥ್ಯದಲ್ಲಿ ೧೨ನೇ ಬ್ರಿಕ್ಸ್ ಪರಿಸರ ಸಚಿವರ ಸಭೆ ಇಂದು ನವದೆಹಲಿಯಲ್ಲಿ ನಡೆಯುತ್ತಿದೆ. ಪರಿಸರ ಕ್ಷೇತ್ರದ ಕುರಿತು ಕೇಂದ್ರೀಕೃತ ಚರ್ಚೆ, ಒಮ್ಮತ ಮೂಡಿಸುವಿಕೆ ಮತ್ತು ಸಹಕಾರ ಬಲಪಡಿಸಲು ಈ ಸಭೆ ವೇದಿಕೆ ಒದಗಿಸಲಿದೆ ಎಂದು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ತಿಳಿಸಿದೆ. ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದ್ರ ಯಾದವ್ ಸಭೆಯ ಅಧ್ಯಕ್ಷತೆ ವಹಿಸಿದ್ದಾರೆ. ಭಾರತದ ೨೦೨೬ರ ಬ್ರಿಕ್ಸ್ ಅಧ್ಯಕ್ಷತೆಯ 'ಸ್ಥಿತಿಸ್ಥಾಪಕತ್ವ, ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರತೆಗಾಗಿ ನಿರ್ಮಾಣ' ಎಂಬ ಧ್ಯೇಯವಾಕ್ಯದಡಿ ಸಭೆ ನಡೆಯುತ್ತಿದೆ. ಸುಸ್ಥಿರ ಜೀವನಶೈಲಿ, ಅರಣ್ಯೀಕರಣ, ಕಾಡ್ಗಿಚ್ಚು

ನಿರ್ವಹಣೆ ಮತ್ತು ವಿಪತ್ತು ಸ್ಥಿತಿಸ್ಥಾಪಕತ್ವ, ವೃತ್ತಾಕಾರದ ಆರ್ಥಿಕತೆ ಹಾಗೂ ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವಿಕೆ ಪ್ರಮುಖ ಆದ್ಯತಾ ಕ್ಷೇತ್ರಗಳಾಗಿವೆ ಎಂದು ಸಚಿವಾಲಯ ತಿಳಿಸಿದೆ.

**<>><><*><><<>**

ಅಯೋಧ್ಯೆಯ ಶ್ರೀ ರಾಮಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ದೇಣಿಗೆ ಸಂಗ್ರಹದಲ್ಲಿ ಅಕ್ರಮ ನಡೆದಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿದ್ದ ವಿಶೇಷ ತನಿಖಾ ತಂಡ-ಎಸ್‌ಐಟಿ, ಟ್ರಸ್ಟ್‌ನ ಮಾಜಿ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಮತ್ತು ಮಾಜಿ ಟ್ರಸ್ಟಿ ಅನಿಲ್ ಮಿಶ್ರಾ ಅವರಿಗೆ ದೋಷಮುಕ್ತ ವರದಿ ನೀಡಿದೆ. ಅಕ್ರಮದ ಆರೋಪಗಳ ಹಿನ್ನೆಲೆಯಲ್ಲಿ ಜೂನ್ ೨೭ ರಂದು ಇಬ್ಬರೂ ರಾಜೀನಾಮೆ ನೀಡಿದ್ದರು. ಉತ್ತರ ಪ್ರದೇಶ ಸರ್ಕಾರ ರಚಿಸಿದ್ದ ಮೂವರು ಸದಸ್ಯರ ಎಸ್‌ಐಟಿ ಅಂತಿಮ ವರದಿಯನ್ನು ಟ್ರಸ್ಟ್‌ಗೆ ಸಲ್ಲಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ೮ ಆರೋಪಿಗಳನ್ನು ಬಂಧಿಸಿ ಭಾರತೀಯ ನ್ಯಾಯ ಸಂಹಿತೆ ಹಾಗೂ ಭ್ರಷ್ಟಾಚಾರ ತಡೆ ಕಾಯ್ದೆಯಡಿ ಕ್ರಮ ಜರುಗಿಸಲಾಗಿದೆ.

**<>><><*><><<>**

ಜೆಎಸ್‌ಎಸ್‌ಸಿ ಹಾಗೂ ಟಿಡಿಪಿಎಲ್ ನಡೆಸಿದ ಪರೀಕ್ಷೆಗಳನ್ನು ಝಾರ್ಖಂಡ್ ಸರ್ಕಾರ ರದ್ದುಗೊಳಿಸಿದ ಹಿನ್ನೆಲೆಯಲ್ಲಿ ವಿದ್ಯಾರ್ಥಿ ಮುಖಂಡ ದೇವೇಂದ್ರ ನಾಥ್ ಮಹತೋ ಸೇರಿದಂತೆ ನಾಲ್ವರು ಅಭ್ಯರ್ಥಿಗಳು ತಮ್ಮ ೧೬ ದಿನಗಳ ಉಪವಾಸ ಸತ್ಯಾಗ್ರಹವನ್ನು ಹಿಂಪಡೆದಿದ್ದಾರೆ. ಸಚಿವರಾದ ದೀಪಿಕಾ ಪಾಂಡೆ ಸಿಂಗ್ ಮತ್ತು ಇರ್ಫಾನ್ ಅನ್ಸಾರಿ ಅವರು ರಾಂಚಿ ಆಸ್ಪತ್ರೆಯಲ್ಲಿ ಪಾನೀಯ ನೀಡುವ ಮೂಲಕ ಈ ಸತ್ಯಾಗ್ರಹವನ್ನು ಅಂತ್ಯಗೊಳಿಸಿದರು. ಸರ್ಕಾರದ ಈ ನಿರ್ಧಾರವನ್ನು ಪ್ರತಿಭಟನಾ ನಿರತ ವಿದ್ಯಾರ್ಥಿಗಳು ಮೊದಲ ಹಂತದ ವಿಜಯವೆಂದು ಸಂಭ್ರಮಿಸಿದ್ದರೂ, ನೇಮಕಾತಿ ಅಕ್ರಮಗಳ ಕುರಿತು ಸಿಬಿಐ ತನಿಖೆಗೆ ಆಗ್ರಹಿಸಿ ಜೆಪಿಎಸ್‌ಸಿ-ಜೆಎಸ್‌ಎಸ್‌ಸಿ ಸುಧಾರಣಾ ವೇದಿಕೆಯು ತನ್ನ ಹೋರಾಟವನ್ನು ಮುಂದುವರಿಸುವುದಾಗಿ ತಿಳಿಸಿದೆ. ಈ ನಡುವೆ, ೨೦೧೪ ರಿಂದ ನಡೆದ ಎಲ್ಲಾ ನೇಮಕಾತಿ ಪರೀಕ್ಷೆಗಳ ಸಮಗ್ರ ಪರಿಶೀಲನೆಗೆ ಆದೇಶಿಸಿರುವ ಸರ್ಕಾರ, ಪರೀಕ್ಷಾ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಲು ಐಎಎಸ್ ಅಧಿಕಾರಿ ಅಮಿತಾಭ್ ಕೌಶಲ್ ನೇತೃತ್ವದಲ್ಲಿ ಸುಧಾರಣಾ ಸಮಿತಿಯನ್ನು ರಚಿಸಿದೆ.

**<>><><*><><<>**

ಮತ ರಾಜಕಾರಣಕ್ಕಾಗಿ ವಿರೋಧ ಪಕ್ಷಗಳು ವಿದೇಶಿ ದೇಣಿಗೆ ನಿಯಂತ್ರಣ ತಿದ್ದುಪಡಿ ಕುರಿತು ಸುಳ್ಳು ಮಾಹಿತಿ ಹಾಗೂ ಗೊಂದಲಗಳನ್ನು ಹರಡುತ್ತಿವೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಆರೋಪಿಸಿದ್ದಾರೆ. ಖಾಸಗಿ ಸುದ್ದಿ ಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಅವರು, ಈ ತಿದ್ದುಪಡಿ ಮಸೂದೆ ವಿದೇಶಿ ಧನಸಹಾಯದ ಹರಿವಿನಲ್ಲಿ ಪಾರದರ್ಶಕತೆಯನ್ನು ತರಲಿದ್ದು, ಶೀಘ್ರದಲ್ಲೇ ಸತ್ಯ ಹೊರಬೀಳಲಿದೆ ಎಂದು ಹೇಳಿದ್ದಾರೆ. ಈ ಮಸೂದೆಯನ್ನು ಜಂಟಿ ಸಂಸದೀಯ ಸಮಿತಿಗೆ ಒಪ್ಪಿಸಿರುವುದು ಅತ್ಯುತ್ತಮ ನಿರ್ಧಾರ ಎಂದಿರುವ ಅವರು, ವಿರೋಧ ಪಕ್ಷಗಳು ಸತ್ಯಕ್ಕೆ ದೂರವಾದ ವಿಷಯಗಳನ್ನು ಪ್ರಚಾರ ಮಾಡುತ್ತಿದೆ ಎಂದಿದ್ದಾರೆ.

**<>><><*><><<>**

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್, ಉತ್ತರಪ್ರದೇಶ, ಪಂಜಾಬ್ ಮತ್ತು ಗುಜರಾತ್ ರಾಜ್ಯಗಳಿಗೆ ನೂತನ ಉಸ್ತುವಾರಿಗಳನ್ನು ನೇಮಕ ಮಾಡಿದ್ದಾರೆ. ಉತ್ತರ ಪ್ರದೇಶದ ರಾಜ್ಯ ಬಿಜೆಪಿ ಉಸ್ತುವಾರಿಯಾಗಿ ವಿನೋದ್ ತಾವ್ಡೆ, ಸಹ ಉಸುವಾರಿಯಾಗಿ ಜಗದೀಶ್ ಈಶ್ವರ್‌ಭಾಯಿ ಪಟೇಲ್ ಅವರನ್ನು ನೇಮಿಸಲಾಗಿದೆ. ಪಂಜಾಬ್ ರಾಜ್ಯದ ಉಸ್ತುವಾರಿಯಾಗಿ ಡಾ.ಸತೀಶ್ ಪೂನಿಯಾ ಹಾಗೂ ಗುಜರಾತ್ ರಾಜ್ಯದ ಉಸ್ತುವಾರಿಯಾಗಿ ತರುಣ್ ಚುಗ್ ಅವರನ್ನು ನೇಮಕ ಮಾಡಲಾಗಿದೆ.

**<>><><*><><<>**

ಭಾರತದ ಮತದಾರರ ಗುರುತಿನ ಚೀಟಿ ವ್ಯವಸ್ಥೆಯನ್ನು ಅಮೆರಿಕಾ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಶ್ಲಾಘಿಸಿದ್ದು, ಅಮೆರಿಕದಲ್ಲಿ ಕಟ್ಟುನಿಟ್ಟಿನ ಚುನಾವಣಾ ನಿಯಮಗಳಿಗೆ ಭಾರತ ಒಂದು ಮಾದರಿ ಎಂದು ಹೇಳಿದ್ದಾರೆ. ಭಾರತದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರೊಂದಿಗಿನ ಇತ್ತೀಚಿನ ಸಂವಾದವನ್ನು ಉಲ್ಲೇಖಿಸಿರುವ ಅವರು, ಅಮೆರಿಕದಲ್ಲಿ ಮಾನ್ಯವಾದ ಭಾವಚಿತ್ರದ ಗುರುತಿನ ದಾಖಲೆ ಕಡ್ಡಾಯವಿಲ್ಲದೆ ಚುನಾವಣೆ ನಡೆಸುವುದು ಹೇಗೆ ಸಾಧ್ಯ ಎಂದು ಜ್ಞಾನೇಶ್ ಕುಮಾರ್ ಪ್ರಶ್ನಿಸಿದ್ದರು ಎಂದು ಸಾಮಾಜಿಕ ಜಾಲತಾಣದಲ್ಲಿ ಅಧ್ಯಕ್ಷ ಟ್ರಂಪ್ ತಿಳಿಸಿದ್ದಾರೆ. ಅಮೆರಿಕದ ಫೆಡರಲ್ ಚುನಾವಣೆಗಳಲ್ಲಿ ಮತದಾನಕ್ಕೆ ಕಠಿಣ ನಿಯಮಗಳನ್ನು ಜಾರಿಗೊಳಿಸುವ 'ಸೇವ್ ಅಮೆರಿಕಾ ಕಾಯ್ದೆ'ಯನ್ನು ಅಂಗೀಕರಿಸುವಂತೆ ಅಧ್ಯಕ್ಷ ಟ್ರಂಪ್ ಅಮೆರಿಕಾ ಸಂಸತ್‌ಗೆ ಮತ್ತೊಮ್ಮೆ ಒತ್ತಾಯಿಸಿದ್ದಾರೆ. ಪ್ರಸ್ತಾವಿತ ಕಾಯ್ದೆಯಡಿ ಫೆಡರಲ್ ಚುನಾವಣೆಗಳಿಗೆ ನೋಂದಣಿ ಸಂದರ್ಭದಲ್ಲಿ ಅಮೆರಿಕದ ಪೌರತ್ವದ ದಾಖಲೆ ಹಾಗೂ ಸರ್ಕಾರ ನೀಡಿರುವ ಭಾವಚಿತ್ರದ

ಗುರುತಿನ ಚೀಟಿ ಒದಗಿಸುವುದು ಕಡ್ಡಾಯವಾಗಲಿದೆ. ಅಮೆರಿಕದ ನಾಗರಿಕರು ಮಾತ್ರ ದೇಶದ ಚುನಾವಣೆಗಳಲ್ಲಿ ಭಾಗವಹಿಸುವುದನ್ನು ಖಚಿತಪಡಿಸಿಕೊಳ್ಳಲು ಈ ಕಾಯ್ದೆ ಉದ್ದೇಶಿಸಿದೆ ಎಂದು ಶ್ವೇತಭವನ ತಿಳಿಸಿದೆ.

<>><><*><><<>

ಕರ್ನಾಟಕ ಲೋಕಸೇವಾ ಆಯೋಗ-ಕೆಪಿಎಸ್‌ಸಿಯಲ್ಲಿ ನಡೆದಿದೆ ಎನ್ನಲಾದ ಪಶುವೈದ್ಯಾಧಿಕಾರಿಗಳ ನೇಮಕಾತಿ ಪರೀಕ್ಷೆಯ ಅಕ್ರಮ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ-ಇಡಿ ಇಂದು ಕರ್ನಾಟಕ ಹಾಗೂ ಅಹಮದಾಬಾದ್‌ನ ಒಟ್ಟು ೧೧ ಸ್ಥಳಗಳಲ್ಲಿ ಏಕಕಾಲಕ್ಕೆ ಶೋಧ ಮತ್ತು ವಶ ಕಾರ್ಯಾಚರಣೆ ನಡೆಸುತ್ತಿದೆ. ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ-Pಒಐಂ ಅಡಿಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಇಡಿ ದಾಳಿಗೊಳಗಾದ ಸ್ಥಳಗಳಲ್ಲಿ ಬೆಂಗಳೂರಿನ ಕೆಪಿಎಸ್‌ಸಿ ಮುಖ್ಯ ಕಚೇರಿ, ಅಮಾನತುಗೊಂಡಿರುವ ಕೆಪಿಎಸ್‌ಸಿ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್ ಹಾಗೂ ಸದಸ್ಯೆ ಶಾಂತಾ ಹೊಸಮನಿ ಅವರ ನಿವಾಸಗಳು, ಮಧ್ಯವರ್ತಿಗಳ ಕಚೇರಿಗಳು, 'ಎಜುಟೆಸ್ಟ್ ಸೊಲ್ಯೂಷನ್ಸ್' ಕಂಪನಿಯ ಆವರಣಗಳು ಮತ್ತು ಆಯ್ಕೆಯಾದ ಕೆಲವು ಅಭ್ಯರ್ಥಿಗಳ ಮನೆಗಳು ಸೇರಿವೆ. ಪಶುವೈದ್ಯಾಧಿಕಾರಿಗಳ ಅಂತಿಮ ಆಯ್ಕೆ ಪಟ್ಟಿಯಲ್ಲಿ ತೀವ್ರ ಅಕ್ರಮ ನಡೆದಿದೆ ಎಂದು ಆರೋಪಿಸಿ ದಾಖಲಾಗಿರುವ ಹಲವು ಎಫ್‌ಐಆರ್‌ಗಳ ಆಧಾರದ ಮೇಲೆ ಈ ತನಿಖೆ ನಡೆಯುತ್ತಿದೆ. ಪರೀಕ್ಷಾ ಪ್ರಶ್ನೆಪತ್ರಿಕೆ ಸೋರಿಕೆ, ಒಎಂಆರ್ ಉತ್ತರ ಪತ್ರಿಕೆ ತಿದ್ದುಪಡಿ ಹಾಗೂ ಕೆಪಿಎಸ್‌ಸಿ ಉನ್ನತಾಧಿಕಾರಿಗಳ ಸಂಬಂಧಿಕರಿಗೆ ನಿಯಮಬಾಹಿರವಾಗಿ ಹುದ್ದೆಗಳನ್ನು ಒದಗಿಸಿದ ಆರೋಪಗಳು ಈ ದೂರುಗಳಲ್ಲಿದ್ದು, ಇಡಿ ತನಿಖೆ ತೀವ್ರಗೊಳಿಸಿದೆ.

<>><><*><><<>

ಭಾರತೀಯ ಸೇನಾ ಮುಖ್ಯಸ್ಥ ಜನರಲ್ ಧೀರಜ್ ಸೇಠ್ ಅವರಿಗೆ ನೇಪಾಳ ಸೇನೆಯ ಗೌರವಾನ್ವಿತ ಜನರಲ್ ಹುದ್ದೆಯನ್ನು ಪ್ರದಾನ ಮಾಡಲಾಗಿದೆ. ಕಠ್ಮಂಡುವಿನಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ನೇಪಾಳದ ರಾಷ್ಟ್ರಪತಿ ರಾಮಚಂದ್ರ ಪೌಡೇಲ್ ಅವರು ಈ ಗೌರವವನ್ನು ಪ್ರದಾನ ಮಾಡಿದರು. ೧೯೫೦ರಿಂದ ಭಾರತ ಮತ್ತು ನೇಪಾಳ ಪರಸ್ಪರರ ಸೇನಾ ಮುಖ್ಯಸ್ಥರಿಗೆ ಗೌರವಾನ್ವಿತ ಜನರಲ್ ಹುದ್ದೆ ನೀಡುವ ದೀರ್ಘಕಾಲದ ಪರಂಪರೆಯ ಮುಂದುವರಿಕೆಯಾಗಿದೆ.

<>><><*><><<>

ಜಾಂಬಿಯಾ ಅಧ್ಯಕ್ಷರಾಗಿ ಹಕೈಂಡೆ ಹಿಚಿಲೆಮಾ ಅವರು ಎರಡನೇ ಬಾರಿ ಐದು ವರ್ಷದ ಅವಧಿಗೆ ಮರು ಆಯ್ಕೆಯಾಗಿದ್ದಾರೆ ಎಂದು ಜಾಂಬಿಯಾ ಚುನಾವಣಾ ಆಯೋಗ ಘೋಷಿಸಿದೆ. ಹಿಚಿಲೆಮಾ ೨೯ ಲಕ್ಷಕ್ಕೂ ಅಧಿಕ ಮತಗಳನ್ನು ಪಡೆದಿದ್ದು, ಪ್ರತಿಸ್ಪರ್ಧಿ ಬ್ರಿಯಾನ್ ಮುಂಡುಬಿಲೆ ೧೮ ಲಕ್ಷಕ್ಕೂ ಹೆಚ್ಚು ಮತಗಳನ್ನು ಗಳಿಸಿದ್ದಾರೆ. ಮತ ಎಣಿಕೆ ವೇಳೆ ಭದ್ರತಾ ಕಾರಣಗಳಿಂದ ಉಂಟಾದ ಅಡಚಣೆ ಹಾಗೂ ಮತಗಟ್ಟೆ ಅಧಿಕಾರಿಗಳ ಮೇಲಿನ ದಾಳಿ, ಮತಪತ್ರಗಳ ಕಳವು ಪ್ರಕರಣಗಳಿಂದ ಚುನಾವಣೆ ಗಮನ ಸೆಳೆದಿತ್ತು.

**<>><><*><><<>**

ನವದೆಹಲಿಯ ಇಂದಿರಾ ಗಾಂಧಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಬಿಡಬ್ಲ್ಯೂಎಫ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್-೨೦೨೬ರ ಇಂದಿನ ಪಂದ್ಯಗಳಲ್ಲಿ ಹಲವು ಪ್ರಮುಖ ಭಾರತೀಯ ಆಟಗಾರರು ಕಣಕ್ಕಿಳಿಯುತ್ತಿದ್ದಾರೆ. ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಲಕ್ಷ್ಯ ಸೇನ್ ಇಂದು ನಡೆಯಲಿರುವ ೬೪ರ ಸುತ್ತಿನ ಪಂದ್ಯದಲ್ಲಿ ಆಸ್ಟ್ರೀಯಾದ ಕಾಲಿನ್ಸ್ ವ್ಯಾಲೆಂಟೈನ್ ಫಿಲಿಮಾನ್ ವಿರುದ್ಧ ಸೆಣಸಲಿದ್ದಾರೆ. ಮಹಿಳಾ ಸಿಂಗಲ್ಸ್‌ನಲ್ಲಿ ಭಾರತದ ಉನ್ನತಿ ಹೂಡಾ ಕಣಕ್ಕಿಳಿಯುತ್ತಿದ್ದರೆ, ತಾರಾ ಶೆಟ್ಲರ್ ಪಿ.ವಿ.ಸಿಂಧು ಅವರ ಪಂದ್ಯ ನಾಳೆ ನಿಗದಿಯಾಗಿದೆ. ಮಹಿಳಾ ಡಬಲ್ಸ್‌ನಲ್ಲಿ ಭಾರತದ ಗಾಯಿತ್ರಿ ಗೋಪಿಚಂದ್ ಮತ್ತು ತ್ರಿಶಾ ಜಾಲಿ ಜೋಡಿ ಹಾಗೂ ಸಿಮ್ರನ್ ಸಿಂಘಿ ಮತ್ತು ಕವಿತ್ರಿಯಾ ಸೆಲ್ವಂ ಜೋಡಿ ೩೨ರ ಸುತ್ತಿನ ಪ್ರತ್ಯೇಕ ಪಂದ್ಯಗಳಲ್ಲಿಂದು ಕಣಕ್ಕಿಳಿಯುತ್ತಿವೆ. ಇನ್ನು ಮಿಶ್ರ ಡಬಲ್ಸ್ ವಿಭಾಗದ ೬೪ರ ಸುತ್ತಿನ ಪಂದ್ಯದಲ್ಲಿ ಭಾರತದ ಕೃತ್ತಿಕಾ ಗಡ್ಡೆ ಮತ್ತು ರೋಹನ್ ಕಪೂರ್ ಜೋಡಿ ಕೆನಡಾ ಜೋಡಿ ವಿರುದ್ಧ ಪರಾಭವಗೊಂಡಿದೆ.

**<>><><*><><<>**

ಶ್ರೀಲಂಕಾದ ಗಾಲೆ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಶ್ರೀಲಂಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದ ೪ನೇ ದಿನವಾದ ಇಂದು ಭಾರತ ತನ್ನ ಮುನ್ನಡೆಯನ್ನು ಮತ್ತಷ್ಟು ವಿಸ್ತರಿಸುತ್ತಿದ್ದು, ತನ್ನ ಎರಡನೇ ಇನ್ನಿಂಗ್ಸ್‌ನಲ್ಲಿ ಇತ್ತೀಚಿನ ವರದಿ ಬಂದಾಗ ೫ ವಿಕೆಟ್ ನಷ್ಟಕ್ಕೆ ೧೩೯ ರನ್ ಗಳಿಸಿ ೩೧೭ ರನ್‌ಗಳ ಮುನ್ನಡೆಯಲ್ಲಿದೆ. ನಿನ್ನೆ ಮೂರನೇ ದಿನದಾಟದ ಅಂತ್ಯಕ್ಕೆ ಭಾರತ, ಶ್ರೀಲಂಕಾ ತಂಡವನ್ನು ೨೮೪ ರನ್‌ಗಳಿಗೆ ಸೀಮಿತಗೊಳಿಸುವಲ್ಲಿ ಸಫಲವಾಯಿತು. ಆ ಮೂಲಕ ಇಂದು ತನ್ನ ಎರಡನೇ ಇನ್ನಿಂಗ್ಸ್ ಅನ್ನು ಭಾರತ ೧೭೮ ರನ್‌ಗಳ ಮುನ್ನಡೆಯೊಂದಿಗೆ ಆರಂಭಿಸಿದೆ.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧.೩೦ ಕ್ಕೆ ><><<>